'ಗೊತ್ತಿಲ್ಲ ಅಂದ್ರೆ? ಗೊತ್ತಿರಬೇಕು' ಕಿರುಚಿದಳು ಗುಲ್ನೂರ್.

ಮೊತಿಜಾನ್ ಗಡಗಡ ನಡುಗಿದಳು. ತಟ್ಟೆಯೊಳಗೆ ಕೈಬೆರಳು ಹಾಗೇ ನಿಂತುಹೋದವು. ಗಂಟಲಲ್ಲಿ ಅನ್ನ ಸಿಕ್ಕಾಕೊಂಡ್ತು. ಯಾವಾಗ ಬೇಕಾದರೂ ಅದು ದಬದಬ ಅಂತ ಈಚೆಗೆ ಬರಬಹುದು.

'ಕಂಯಾ ಕಂಯಾ ಅಂತ ಕೂತಿರಬೇಡ, ಎದ್ದು ಪಾತ್ರೆ ತೊಳೆಯೋಗು.'

ಕೆಲಸ ಅವಳನ್ನು ಪಾರು ಮಾಡ್ತು, ಸದ್ಯ ತಪ್ಪಿಸಿಕೊಳ್ಳೋಕೆ ದಾರಿಯಾಯ್ತು. ಪಾತ್ರೆ ಪಗಡಿ ತಕ್ಕೊಂಡು ನೀರಿನ ಗುಂಡಿಯ ಹತ್ತಿರ ಬಂದಳು.

ಆಗ ಮಟಮಟ ಮಧ್ಯಾಹ್ನ. ನಾಲ್ಕೂ ದಿಕ್ಕಿಗೆ ಉರಿಯೋ ಸೂರ್ಯ. ಅವಳು ಕಣ್ಣೆವೆಯಾಡಿಸದೆ ಬಿಸಿಲನ್ನು ನೋಡ್ತಾಯಿದ್ದಳು. ಬಾಬಾನ ನೆನೆದು ಅವಳಿಗೆ ಅಳು ಬಂತು. ಮಂಡಿಯ ಮೇಲೆ ತಲೆಯಿರಿಸಿ ಅತ್ತು ಹಗುರಾಗಲು ಪ್ರಯತ್ನಿಸಿದಳು. ಬಾಬಾ ಯಾಕೆ ಸುಳ್ಳು ಭರವಸೆ ಕೊಟ್ಟ? ಮದುವೆಯಾಗದೆಯಿದ್ರೆ ಏನಾಗ್ತಾಯಿತ್ತು?

ಅವಳಿಗೇನೋ ಆಸೆಯಿತ್ತು. ಹಳ್ಳಿಯ ಸಹಕಾರಿ ಸಂಘಕ್ಕೆ ಗೆಳತಿಯರೊಂದಿಗೆ ಕಸೂತಿ ಹಾಕೋ, ಕೌದಿ ಹೊಲಿಯೋ ಕೆಲಸ ಮಾಡಲು ಹೋಗಬೇಕು ಅಂತ. ತನ್ನ ಸಂಪಾದನೆ ತಾನೇ ಮಾಡಬೇಕು ಅಂತ ಛಲ ಇತ್ತು. ಬಾಬಾ ಬೇಡ ಅಂದುಬಿಟ್ಟ. ಮಗಳಿಗೆ ಮದುವೆಯಾಗದೆ ಹೋದ್ರೆ ತನ್ನ ಮಾನ ಮರ್ಯಾದೆ ಉಳಿಯೋದಿಲ್ಲ ಅಂತ. ಹೇಗಾದರೂ ಸರಿ ಮದುವೆ ಮಾಡಲೇಬೇಕಿತ್ತು. ಯಾಕೆ? ಯಾಕೆ? ಅವಳಿಗೆ ಪಾತ್ರೆಗಳನ್ನು ನೀರೊಳಗೆ ಒಗಿಬೇಕು ಅನ್ನಿಸಿತು. ಎಲ್ಲಿಯ ಮದುವೆ? ಎಲ್ಲಿಯ ಸಂಸಾರ? ಎಲ್ಲಿಯ ಗಂಡ? ಇದೇನಾ ಬಾಬಾನ ಮಾನ ಮರ್ಯಾದೆ? ಬಡವರ ಮಾನ ಮರ್ಯಾದೆ ಅಂದ್ರೆ, ಅನ್ನ ಬಟ್ಟೆ.

ಮಧ್ಯಾಹ್ನದ ಬಿಸಿಲನ್ನು ನಿರ್ಲಿಪ್ತವಾಗಿ ದಿಟ್ಟಿಸುತ್ತಿದ್ದಳು ಮೊತಿಜಾನ್. ಬೀಡಿ ಹೊಗೆ ತುಂಬಿದ ರೂಮಿನ ನೀಲಿ ಬಲೂನ್ ನಿಧಾನಕ್ಕೆ ಆಕಾಶಕ್ಕೇರುತ್ತಾಯಿದೆ. ಅವಳಿಗೆ ಅದನ್ನು ಹಿಡಿಯೋಕೆ ಆಗ್ತಾಯಿಲ್ಲ. ಆ ಮಧ್ಯಾಹ್ನದ ಬಿಸಿಲು ಅವಳೊಳಗೆ ಘನೀಕೃತಗೊಳ್ಳತೊಡಗಿತು. ಈ ರೀತಿ ನಾನು ಗಟ್ಟಿ ಹೆಣ್ಣಾಗಬೇಕು, ಅಂದುಕೊಂಡಳು ಮೊತಿಜಾನ್.

ದಿನಗಳು ಉರುಳುತ್ತವೆ. ಅದುವೇ ದಿನದ ನಿಯಮ. ಮೊತಿಜಾನಳ ದಿನಗಳೂ ಉರುಳಿದವು. ಅವಳಿಗೆ ಅರ್ಥವಾಗಿದೆ, ಅಬ್ದುಲ್ ಅವಳ ಜೀವನದಲ್ಲಿ ಇಲ್ಲ. ತಿಂಗಳಲ್ಲಿ ಅರ್ಧ ದಿನಗಳು ಅವನು ಸೂಳೆಮನೇಲಿ ಬಿದ್ದಿರ್ತಾನೆ. ಮೊದಮೊದಲು ಮೊತಿಜಾನ್ ಈ ಬಗ್ಗೆ ಪ್ರಶ್ನೆ ಮಾಡಿ ಹೊಡೆಸಿಕೊಂಡಿದಾಳೆ. ಈಗಂತೂ ಅವಳು ಈ ವಿಷಯಾನ ಎತ್ತೋದೇ ಇಲ್ಲ. ಗುಲ್ನೂರ್ ಕೂಡ ಮಗ ಮನೆಗೆ ಬರ್ತಾನೋ ಇಲ್ಲವೋ ಅಂತ ತಲೆಕೆಡಿಸಿಕೊಳ್ಳೋದಿಲ್ಲ. ಮಗ ಏನು ಮಾಡಿದರೂ ಸರಿ. ಮಗ ಮನೆಗೆ ಬರದೇ ಇದ್ರೆ ಒಳ್ಳೇದು ಅವಳಿಗೆ. ಆಗ ಸೊಸೆನ ಚೆನ್ನಾಗಿ ಕುಕ್ಕಿಮುಕ್ಕಬಹುದು. ಅಬ್ದುಲ್ ಇದ್ದರೆ ಹಾಗೆ ಮಾಡೋಕಾಗೊದಿಲ್ಲ. ಮಗ ಅನ್ನೋ ಬೆಲೆ ಕೊಡಬೇಕು, ಅದಕ್ಕೆ ಸುಮ್ಮನಿರಬೇಕು.

ವರದಕ್ಷಿಣೆ ವಿಚಾರವಾಗಿ ಭಯಂಕರ ಕೋಪ ಬರುತ್ತೆ ಗುಲ್ನೂರ್‌ಗೆ. ರೇಗುತ್ತಾ ಹೇಳ್ತಾಳೆ, 'ನಿಮ್ ಬಾಬಾ ಸುಳ್ಳುಗಾರ, ಮೋಸಗಾರ, ಸೈಕಲ್ ವಾಚು ಕೊಡೋಕೆ ಆಗ್ದೆಯಿದ್ರೆ, ಕೊಡ್ತೀನಿ ಅಂತ ಯಾಕ್ ಹೇಳ್ದ?' ಆಗ ಅಬ್ದುಲ್ ಕೂಡ ಅಮ್ಮನ ಜೊತೆ ಸೇರ್ಕೋತಾನೆ.

ಮೊತಿಜಾನ್‌ಗೆ ಗಂಟಲು ಕಟ್ಟಿದಾಗಾಗುತ್ತೆ. ಒಂದಿನ ಅವಳಿಗೆ ಸುಮ್ಮನೆ ಇರಲಿಕ್ಕಾಗ್ಲಿಲ್ಲ. ಹೆದರುತ್ತಾ, ನಡುಗುವ ಧ್ವನಿಯಲ್ಲಿ ಹೇಳಿದಳು, 'ಬಾಬಾಜಾನ್ ಬಡವ, ಮೋಸಗಾರ ಅಲ್ಲ. ದುಡ್ಡು ಇಲ್ಲ. ಅದಕ್ಕೆ ಸೈಕಲ್ ವಾಚು ಕೋಡೋಕೆ ತಡ ಆಗ್ತಿದೆ'.

'ಬಾಯ್ಮುಚ್ಚೆ ಹರಾಮಜಾದಿ! ದೊಡ್ಡ ದೊಡ್ಡ ಮಾತಾಡ್ಬೇಡ!'